<u>ದಿನಾಂಕ 17 ನೇ ಜೂನ್ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ</u> ಪ್ರತಿವಾದಿ ಪರ ವಕೀಲರಿಂದ.

ಬಾಳಾಜಿ ಗ್ರಾಮದಲ್ಲಿ ಕೊಣಿಯಂಡ ಕುಟುಂಬದವರು 20 ಕುಟುಂಬ ಇವೆ. ಸದರಿ 20 ಕುಟುಂಬದವರು ಸಹ ಬಾಳಾಜಿ ಗ್ರಾಮದಲ್ಲಿ ಆಸ್ತಿ ಹೊಂದಿದ್ದಾರೆ ಎಂದರೆ ಸರಿ. ಬಾಳಾಜಿ ಗ್ರಾಮದಲ್ಲಿ ಕೊಣಿಯಂಡ ಕುಟುಂಬದವರ ಗದ್ದೆ ಜಮೀನಿನ ಸರ್ವೆ ನಂಬರ್ ಗಳು 42ಃ2, 58ಃ1, 58ಃ2. ಸರ್ವೆ ನಂ. 42 ಈಗ ಬೇರೆ ಬೇರೆ ಸಂಖ್ಯೆಗಳಾಗಿ ವಿಂಗಡಣೆಯಾಗಿದೆ ಎಂದರೆ ಸರಿ. ಸದರಿ 42 ಸರ್ವೆ ನಂಬರ್ ನಮ್ಮ ಕುಟುಂಬದವರ ನಡುವೆಯೇ ವಿಂಗಡಣೆಯಾಗಿದೆ ಎಂದರೆ ಸರಿಯಲ್ಲ. ಕೊಣಿಯಂಡ ಕುಟುಂಬಸ್ಥರು ಮತ್ತು ಪ್ರತಿವಾದಿಯರು ನಾನು ಅನಧಿಕೃತವಾಗಿ ಕೊಣಿಯಂಡ ಕುಟುಂಬಸ್ಥರು ಗದ್ದೆಯನ್ನು ಅತಿಕ್ರಮಿಸಿದ್ದೇನೆ ಎಂದು ನನ್ನ ವಿರುದ್ಧ 2014 ರಲ್ಲಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು ಎಂದರೆ ಸರಿ. ಸದರಿ ದೂರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸೌಹಾರ್ದಯುತವಾಗಿ ಬಗೆಹರಿಯಿತು ಎಂದರೆ ಸರಿ. ನಮ್ಮ ಊರಿನ ಹಿರಿಯರು ಹಾಗೂ ಪ್ರತಿವಾದಿಯರು ಎಲ್ಲರೂ ಸೇರಿ ಬರವಣಿಗೆ ಮುಖಾಂತರ ಸದರಿ ಸಮಸ್ಯೆಯನ್ನು ಬಗೆಹರಿಸಿಕೊಂಡೆವು ಎಂದರೆ ಸರಿ.

ಸರ್ವೆ ನಂಬರ್ 42 ರಲ್ಲಿ ನಮ್ಮ ಕುಟುಂಬದ ಸದಸ್ಯರಿಗೆ ಎಲ್ಲಾ ಹಕ್ಕು ಇದೆ ಎಂದರೆ ಸರಿ. ಸರ್ವೆ ನಂಬರ್ 42 ರ ಗದ್ದೆಯಲ್ಲಿ ನನಗೆ 42ಃ1, 42ಃ3 ರಲ್ಲಿ ಒಟ್ಟು 7 ಎಕರೆ ಗದ್ದೆ ಇದೆ ಎನ್ನುತ್ತಾರೆ. 7 ಎಕರೆ ನನ್ನ ಹಿಸ್ಸೆ ಹೊರತುಪಡಿಸಿ 3 ಎಕರೆ ಸರ್ವೆ ನಂ. 42 ರಲ್ಲಿ ಉಳಿದಿದೆ ಎನ್ನುತ್ತಾರೆ. ಪ್ರತಿವಾದಿಯರು ಸರ್ವೆ ನಂ. 42 ರಲ್ಲಿ ತಮ್ಮ ತಮ್ಮ ಹಿಸ್ಸೆಯಲ್ಲಿ ತಾವೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಗದ್ದೆ ಮಾಡುವವರು ಗದ್ದೆ ಮಾಡುತ್ತಾರೆ, ತೋಟ ಮಾಡುವವರು ತೋಟ ಮಾಡುತ್ತಾರೆ ಎನ್ನುತ್ತಾರೆ. ಸಾಮಾನ್ಯವಾಗಿ ಗದ್ದೆ ಮತ್ತು ತೋಟ ಮಾಡಲು ಸದರಿ ಜಮೀನಿಗೆ ನಿರಂತರವಾಗಿ ಹೋಗಬೇಕಾಗುತ್ತದೆ ಎಂದರೆ ಸರಿ.

ಸರ್ವೆ ನಂ. 42ಃ2 ಪ್ರತಿವಾದಿಯರಿಗೆ ಸೇರಿದೆ ಎಂದರೆ ಸರಿ. ಸರ್ವೆ ನಂ. 42ಃ2 ಅನ್ನು ಪ್ರತಿವಾದಿಯರ ಅಜ್ಜ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದು ಬೇರೆ ಸರ್ವೆ ನಂಬರ್ ಎನ್ನುತ್ತಾರೆ. 1957 ರಲ್ಲಿ ಕೊಣಿಯಂಡ ಅಣ್ಣಯ್ಯನವರು ಕೊಳ್ಳಿಮಾಡ ಕಾಳಯ್ಯನ ಮಗ ಪೂವಯ್ಯರವರಿಂದ ಖರೀದಿಸಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಕೊಣಿಯಂಡ ಕುಟುಂಬಸ್ಥರು ನಮ್ಮ ತಂದೆ ಕಾಲದಿಂದ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿದ್ದಾರೆ ಎನ್ನುತ್ತಾರೆ. ಗದ್ದೆ ಜಮೀನು ಒಂದು ಬಾಣೆ ಎಂದು ನಮ್ಮ ಕುಟುಂಬಕ್ಕೆ ಇದೆ ಎಂದರೆ ಸರಿ. ಸರ್ವೆ

ನಂ.53ಃ2, 53ಃ8 ಸಹ ಪ್ರತಿವಾದಿಯರ ಕುಟುಂಬದ ಆಸ್ತಿ ಎಂದರೆ ಸರಿ. ನಾನು ಒಬ್ಬನೇ ಪ್ರತಿವಾದಿಗಳ ವಿರುದ್ಧ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

ಕೊಣಿಯಂಡ ಕುಟುಂಬದವರಿಗೆ ಸೇರಿದೆ

ಪಾಟೀ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.